ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) 1. ಪರಿಶಿಷ್ಟ ಜಾತಿ ವಿದ್ಯಾರ್ಥಿನಿಲಯಗಳು 1742, 2. ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯ 139.

ಆ) ಸಮಾಜ ಕಲ್ಯಾಣ ಇಲಾಖೆ.

ವರ್ಷ	ನಿಗದಿಪಡಿಸಲಾದ ಅನುದಾನ
1999-2000	5851.14
2000-01	6455.89
2001-02	3048.66

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ವರ್ಷ	ನಿಗದಿಪಡಿಸಲಾದ ಅನುದಾನ
1999-2000	281.42
2000-01	442.62
2001-02	477.76

ಇ) ಸಮಾಜ ಕಲ್ಯಾಣ ಇಲಾಖೆ

	(ಖರ್ಚು ಮಾಡಲಾದ ಹಣ)
1999-2000	6243.50
2000-01	7392.12
2001-02	3301.57

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

	(ಖರ್ಚು ಮಾಡಲಾದ ಹಣ)
1999-2000	241.36
2000-01	419.99
2001-02	426.11

ಈ) ಇಲ್ಲ

ಉ) ಅನ್ವಯಿಸುವುದಿಲ್ಲ.

ಪಶುಸಂಗೋಪನಾ ಇಲಾಖೆಗೆ ಔಷಧಿಗಳ ಖರೀದಿಗಾಗಿ ಒದಗಿಸಲಾಗಿರುವ ಹಣ

1098 (1503) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಪಶುಸಂಗೋಪನೆ ಇಲಾಖೆಗೆ ಔಷಧಿಗಳ ಖರೀದಿಗಾಗಿ ಒದಗಿಸಲಾದ ಹಣ ಎಷ್ಟು ; ಹಾಗೂ ಖರ್ಚು ಮಾಡಲಾದ ಹಣ ಎಷ್ಟು ; (ವರ್ಷವಾರು ಮಾಹಿತಿ ಒದಗಿಸುವುದು) ?

ಅ) ಔಷಧಿಗಳನ್ನು ಟೆಂಡರ್ ಮುಖಾಂತರ ಖರೀದಿಸಲಾಗುವುದೇ ?

ಇ) ಕಳೆದ 3 ವರ್ಷಗಳಲ್ಲಿ ಇಲಾಖೆಗೆ ಔಷಧಿಗಳನ್ನು ಸರಬರಾಜು ಮಾಡಿದವರು ಯಾರು ; ಮತ್ತು ಅವರು ಒದಗಿಸಿದ ಔಷಧಿಗಳ ಮೊತ್ತವೆಷ್ಟು ; (ವರ್ಷವಾರು ಮಾಹಿತಿ ಒದಗಿಸುವುದು) ?

ಈ) ಈ ರೀತಿ ಸರಬರಾಜು ಮಾಡಿದ ಔಷಧಿಗಳಲ್ಲಿ ಅವಧಿ ಮೀರಿದ ಔಷಧಿಗಳ ಒಟ್ಟು ಮೊತ್ತ ಎಷ್ಟು ; ಹಾಗೂ ಈ ರೀತಿ ಅವಧಿ ಮೀರಲಿಕ್ಕೆ ಕಾರಣಗಳೇನು ; ಮತ್ತು ಇದಕ್ಕೆ ಹೊಣೆಗಾರರು ಯಾರು ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಔಷಧಿ ಖರೀದಿಗಾಗಿ ನಿಗಧಿಪಡಿಸಿರುವ ವಂಟನದ ವಿವರ ಅನುಬಂಧ-1 ರಲ್ಲಿ ನೀಡಿದೆ.

ಆ) ಹೌದು

ಇ) ಔಷಧಿ ಖರೀದಿ ವಿವರಗಳನ್ನು ಅನುಬಂಧ-2 ರಲ್ಲಿ ನೀಡಿದೆ.

ಈ) ಅವಧಿ ಮೀರಿದ ಔಷಧಿಗಳು ಯಾವುದೂ ಇರುವುದಿಲ್ಲ, ಅನ್ವಯಿಸುವುದಿಲ್ಲ, ಅನ್ವಯಿಸುವುದಿಲ್ಲ.

ಅನುಬಂಧ-1

ಶ್ರೀ ಗುರುಸ್ವಾಮಿ ಎ.ಎಸ್. ವಿಧಾನಸಬಾ ಸದಸ್ಯರು, ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1503 ಕ್ಕೆ ಅನುಬಂಧ

ಕಳೆದ ಮೂರು ವರ್ಷಗಳಲ್ಲಿ ಔಷಧ ಮತ್ತು ರಾಸಾಯನಿಕಗಳು ಹಾಗೂ ಆಸ್ಪತ್ರೆ ಪರಿಕರಗಳಿಗೆ ಮಂಜೂರಾದ ವಂಟನದ ವಿವರಗಳು ಹಾಗೂ ವೆಚ್ಚ

ರೂ.ಕೋಟಿಗಳಲ್ಲಿ

	1999-2000		2000-2001		2001-2002	
	ಮಂಜೂರಾದ ವಂಟನ	ಒಟ್ಟು ಖರೀದಿ	ಮಂಜೂರಾದ ವಂಟನ	ಒಟ್ಟು ಖರೀದಿ	ಮಂಜೂರಾದ ವಂಟನ	ಒಟ್ಟು ಖರೀದಿ
ಔಷಧಿ ಮತ್ತು ರಾಸಾಯನಿಕಗಳು	4.91	-	5.34	3.30	11.35 *	4.09

(* ಬಜೆಟ್ ಕಡಿತದಿಂದ ಹಂಚಿಕೆ ರೂ. 5.00 ಕೋಟಿಯನ್ನು ತದನಂತರ ಹಿಂಪಡೆದಿದ್ದು ಸೇರಿದೆ)

ಅನುಬಂಧ-2

ಶ್ರೀ ಗುರುಸ್ವಾಮಿ ಎ.ಎಸ್. ವಿಧಾನಸಬಾ ಸದಸ್ಯರು, ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1503 ಕ್ಕೆ ಅನುಬಂಧ

ಕಳೆದ ಮೂರು ವರ್ಷಗಳಲ್ಲಿ ಇಲಾಖೆಗೆ ಔಷಧಿಗಳನ್ನು ಸರಬರಾಜು ಮಾಡಿದವರು ಮತ್ತು ಅವರು ಒದಗಿಸಿದ ಔಷಧಿಗಳ ಮೊತ್ತ

ಕ್ರಮ ಸಂಖ್ಯೆ	ಔಷಧಿಗಳನ್ನು ಸರಬರಾಜು ಮಾಡಿದ ಸಂಸ್ಥೆಗಳ ಹೆಸರುಗಳು	ಒದಗಿಸಿದ ಔಷಧಿಗಳ ಮೊತ್ತ		
		1999-2000 ನೇ ಸಾಲಿಗೆ ರೂ.	2000-01 ನೇ ಸಾಲಿಗೆ ರೂ.	2001-02 ನೇ ಸಾಲಿಗೆ ರೂ.
1.	ಆಲ್‌ಫ್ರೆಡ್ ಬರ್ಗ್ ಅಂಡ್ ಕಂ (ಪ್ರೈ) ಲಿಮಿಟೆಡ್, ಚೆನ್ನೈ	-	14,82,390	-
2.	ಆಲ್‌ವೆಲ್ ಫಾರ್ಮಾ ಅಂಡ್ ಫುಡ್ಸ್ ಪ್ರೈ ಲಿ. ಚೆನ್ನೈ	-	8,55,233	-
3.	ಆನಂದ್ ಫಾರ್ಮಾಸ್ಯೂಟಿಕಲ್ಸ್, ಮುದೋಳ್	-	5,43,646	-
4.	ಆರ್ಮರ್ ಫಾರ್ಮಾಸ್ಯೂಟಿಕಲ್ಸ್, ಹೈದರಾಬಾದ್	-	8,79,360	-
5.	ಕಡಿಲ ಹೆಲ್ತ್‌ಕೇರ್ ಲಿಮಿಟೆಡ್, ಅಹ್ಮದಾಬಾದ್	-	15,41,750	-
6.	ಗ್ಲೋಬ್ ಹೆಲ್ತ್ ನೀಡ್ಸ್, ಬೆಂಗಳೂರು	-	7,24,672	-
7.	ಹೆಕ್ಸ್‌ಪ ರೌಸೆಲ್ ವೆಟ್, ಪ್ರೈ ಲಿ. ಹೈದರಾಬಾದ್	-	16,59,664	-
8.	ಇಂಡಿಯನ್ ಇಮ್ಯುನಲಾಜಿಕಲ್ಸ್ ಲಿ, ಬೆಂಗಳೂರು	-	24,19,793	92,58,617
9.	ಕೆ.ಎ.ಪಿ.ಎಲ್. ಬೆಂಗಳೂರು	-	8,79,262	1,59,93,253
10.	ಮಹೇಂದ್ರ ಲ್ಯಾಬ್ಸ್ ಪ್ರೈ ಲಿ. ಬೆಂಗಳೂರು	-	13,62,150	-
11.	ಮೌಂಟ್ ಮೆತ್ತರ್ ಫಾರ್ಮಾಸ್ಯೂಟಿಕಲ್ಸ್ ಲಿ. ಚೆನ್ನೈ.	-	32,749	-
12.	ಪ್ರೈಮ ವೆಟ್ ಕೇರ್ ಪ್ರೈ ಲಿ, ಬೆಂಗಳೂರು	-	23,21,052	-
13.	ರಾಮಚಂದ್ರ ಪೆಸ್ಟಿಸೈಡ್ಸ್ ಪ್ರೈ ಲಿ. ಬೆಂಗಳೂರು	-	1,82,894	-
14.	ಸ್ಟೈಡ್ಸ್ ಆರ್ಕೊ ಲ್ಯಾಬ್ ಲಿ, ಬೆಂಗಳೂರು	-	13,41,981	44,76,680

15. ಸ್ಟೆರ್ಲಿಂಗ್ ಲ್ಯಾಂಬ್, ಬೆಂಗಳೂರು	-	1,15,42,625	-
16. ಸಿಮಿ ಫಾರ್ಮಾಸ್ಯೂಟಿಕಲ್ಸ್, ಬೆಂಗಳೂರು	-	26,03,877	-
17. ವೀನಸ್ ರೆಮೀಡೀಸ್ ಲಿಮಿಟೆಡ್, ಚಂಡೀಘಡ್	-	8,88,022	-
18. ವೈಶಾಲಿ ಫಾರ್ಮಾಸ್ಯೂಟಿಕಲ್ಸ್ ಲಿಮಿಟೆಡ್, ಕೊಚ್ಚಿನ್	-	17,36,751	-
19. ಆರೈಸ್ ಆಗ್ರೋ-ವೆಟ್ ಇಂಡಸ್ಟ್ರೀಸ್ ಲಿಮಿಟೆಡ್, ಬೆಂಗಳೂರು	-	-	25,28,500
20. ಸರಾಭಯ್ ಜೈಡಸ್ ಅನಿಮಲ್ ಹೆಲ್ತ್ ಪ್ರೈ. ಲಿಮಿಟೆಡ್, ಬೆಂಗಳೂರು	-	-	85,69,600
ಒಟ್ಟು	ಇಲ್ಲ	3,29,97,871	4,08,76,650

ಸಿಂಧನೂರು ಕ್ಷೇತ್ರದಲ್ಲಿ ಬಾಂಗ್ಲದೇಶದ ನಿರಾಶ್ರಿತರ ಬಗ್ಗೆ

1099 (1896) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಿಂಧನೂರು ಕ್ಷೇತ್ರದಲ್ಲಿ ಬಾಂಗ್ಲದೇಶದಿಂದ ಬಂದ ನಿರಾಶ್ರಿತ ಪರಿಶಿಷ್ಟ ಜಾತಿ ಜನರಿಗೆ ಜಾತಿ ಪ್ರಮಾಣ ಪತ್ರ ನೀಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಆ) ಇವರಿಗೆ ವಿಶೇಷ ನಾಗರೀಕ ಮೂಲಭೂತ ಸೌಲಭ್ಯಗಳಾದ ರಸ್ತೆ ಅಭಿವೃದ್ಧಿ ಪಡಿಸುವುದು, ಕುಡಿಯುವ ನೀರಿನ ವ್ಯವಸ್ಥೆ ಹಾಗು ವಿಶೇಷವಾದ ವಸತಿ ಯೋಜನೆ ಕಲ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಭಾರತ ಸರ್ಕಾರವು ಕಾಲಕಾಲಕ್ಕೆ ಅನುಸಾರವಾಗಿ ಪ್ರಕಟಿಸಲಾದ ಪ.ಜಾತಿ ಪ.ಪಂಗಡಗಳ ಪಟ್ಟಿಯು ಭಾರತೀಯ ಪೌರತ್ವ ಪಡೆದಿರುವವರಿಗೆ ಅನ್ವಯಿಸುವುದು. ಬಾಂಗ್ಲದೇಶದಿಂದ ಬಂದ ನಿರಾಶ್ರಿತರು ವಿದೇಶಿಯರಾಗಿದ್ದು ಪ.ಜಾತಿ ಪ್ರಮಾಣಪತ್ರ ಅವರಿಗೆ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಯಾವುದೇ ನಿರ್ದಿಷ್ಟವಾದ ಅಭಿವೃದ್ಧಿ ಕೆಲಸಗಳು ಅವರಿಗಾಗಿಯೇ ಪ್ರತ್ಯೇಕವಾಗಿ ಪರಿಗಣಿಸುತ್ತಿಲ್ಲ.

ಹುಬ್ಬಳ್ಳಿಯ ಮಹದೇವ ಜವಳಿ ಗಿರಣಿ ಕಾರ್ಮಿಕರಿಗೆ ಆರ್ಥಿಕ ಸೌಲಭ್ಯ

1100 (519) ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್‌ಖಾನ್ (ಹುಬ್ಬಳ್ಳಿ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ ಮಹದೇವ ಟೆಕ್ಸ್‌ಟೈಲ್ಸ್ ಮಿಲ್ ಕಾರ್ಮಿಕರಿಗೆ ಲಭ್ಯವಿರುವ ಆರ್ಥಿಕ ಸೌಲಭ್ಯ ನೀಡಲಾಗಿದೆಯೇ ?